ಕೊಲ್ಕತ್ತದಿಂದ ಢಾಕಾಗೆ ಹೋಗಿದ್ದೆವು. ಪಾಕಿಸ್ತಾನದ ಸೈನ್ಯ ಭಾರತದ ಸೈನಕ್ಕೆ ಶರಣಾಗುವ ಘಟನೆಯ ಪಟಗಳನ್ನು ತೆಗೆಯಬೇಕಿತ್ತು. ಒಂದೆಡೆ, ಭಾರತದ ಲೆಫ್ಟಿನೆಂಟ್ ಜನರಲ್ ಜಗಜಿತ್‌ಸಿಂಗ್ ಅರೋರ. ಇನ್ನೊಂದೆಡೆ, ಪಾಕಿಸ್ತಾನದ ಈಸ್ಟ್ರನ್ ಕಮ್ಯಾಂಡಿನ ಜನರಲ್ ನಿಯಾಜಿ. ಪಾಕಿಸ್ತಾನಿ ಸೈನಿಕರು ಮಿಲಿಟರಿ ಅಧಿಕಾರಿಗಳು ಶರಣಾಗತಿ ಪತ್ರಕ್ಕೆ ಸಹಿಮಾಡಿ ಸ್ಟೇಡಿಯಂನಲ್ಲಿ ನೆಲದ ಮೇಲೆ ಕೂತಿದ್ದರು. ಆಗ ಕಮಾಂಡರ್ ನಿಯಾಜಿ ಬಂದು ತನ್ನ ಕೋವಿಯನ್ನು ಅರೋರರ ಮಡದಿ ಭಗವಂತ್ ಕೌರ್ ಅವರ ಕೈಗೆ ಒಪ್ಪಿಸಿದ. ಇದು ಮಿಲಿಟರಿಯಲ್ಲಿ ಸೋತವರು ಶರಣಾಗುವ ಪದ್ಧತಿ. ಇದಾದ ಬಳಿಕ ಢಾಕಾದ ರೇಸ್‌ಕೋರ್ಸಿನಲ್ಲಿ ಒಂದು ಸಾರ್ವಜನಿಕ ಸಭೆಗೆ ಹೋದೆವು. ಅಲ್ಲಿಗೆ ಮುಕ್ತಿವಾಹಿನಿಯ ಹೋರಾಟಗಾರ ಕಾರಿನಲ್ಲಿ ಬಂದ. ವೇದಿಕೆ ಏರಿದ. ಜನ ಆತನ ಭಾಷಣಕ್ಕೆ ಕಾಯುತ್ತಿದ್ದರು. 'ನಾವು ಪಾಕಿಸ್ತಾನಿಗಳನ್ನು ಸುಮ್ಮನೆ ಬಿಡಬಾರದು. ನಮಗೆ ನ್ಯಾಯಬೇಕು. ಅವರನ್ನು ಕೊಲ್ಲಬೇಕು' ಎಂದು ಆತ ಭಾಷಣ ಮಾಡಿದ. ಅವನು ಕೆಳಗಿಳಿದು ಬರುವಾಗ ವೇದಿಕೆಯ ಬಳಿ ಪಾಕಿಸ್ತಾನಿ ಸೈನಿಕರಿಗೆ ನೆರವಾಗಿದ್ದ ಸ್ಥಳೀಯರನ್ನು ಹೆಡೆಮುರಿ ಕಟ್ಟಿ ಕೂರಿಸಲಾಗಿತ್ತು. ಮುಕ್ತಿವಾಹಿನಿಯ ನಾಯಕ ಅವರ ಮುಖದ ಮೇಲೆ ಉಗಿದ. ತನ್ನ ಸಿಗರೇಟನ್ನು ಅವರ ಮುಖದ ಮೇಲೆ ಉಜ್ಜಿ ಹೊರಟುಹೋದ. ನಾವಲ್ಲೇ ನಿಂತಿದ್ದೆವು. ಆಗ ನಮ್ಮಲ್ಲೊಬ್ಬ ಹೇಳಿದ: 'ಅಂತರರಾಷ್ಟ್ರೀಯ ವರದಿಗಾರರು ಇದ್ದೇವೆಂದು ಇವರು ಪ್ರಚಾರಕ್ಕಾಗಿ ಕೈದಿಗಳನ್ನು ಕೊಲ್ಲಬಹುದು. ಇಲ್ಲಿದ್ದರೆ ಕೊಲೆಗೆ ಪ್ರಚೋದನೆ ಕೊಟ್ಟಂತಾಗುತ್ತದೆ. ಜಾಗ ಖಾಲಿ ಮಾಡೋಣ'. ಅಲ್ಲಿಂದ ನಾವು ತ್ವರಿತವಾಗಿ ತೆರಳಿದೆವು. ಆದರೆ ಸ್ವಲ್ಪ ಹೊತ್ತಲ್ಲೇ ಮನುಷ್ಯರು ಆರ್ತವಾಗಿ ಕಿರುಚುವ ಸದ್ದು ಬಂತು. ಮರಳಿ ಓಡಿದೆವು. ಹೋಗುವಷ್ಟರಲ್ಲಿ ಅವರನ್ನೆಲ್ಲ ಬಾನೆಟ್‌ನಿಂದ ಚುಚ್ಚಿ ಕೊಲ್ಲುತ್ತಿದ್ದರು. ನಾವು ಎಷ್ಟಾದರೂ ಪತ್ರಕರ್ತರು. ನಮ್ಮ ವೃತ್ತಿಯ ಭಾಗವಾಗಿ ಆ ಸನ್ನಿವೇಶದ ಪಟ ತೆಗೆದೆವು.



ಚುನಾವಣಾ ಪ್ರಚಾರ ಸಭೆಯಲ್ಲಿ ಕೆನ್ಯಾಟ ಮತ್ತು ಟಾಂ ಮ್ಬೋಯಾ